**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 2459/2025**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಶ್ರೀಧರ್ ವಸಂತ್ ಧರೆಣ್ಣನವರ್ | ಸಿ.ಡಬ್ಲ್ಯೂ-08 |
| ತಂದೆಯ ಹೆಸರು | : | ವಸಂತ್ | ಪಿ.ಡಬ್ಲ್ಯೂ-05 |
| ವಯಸ್ಸು | : | 35 ವರ್ಷ | |
| ಉದ್ಯೋಗ | : | ಪೊಲೀಸ್ ಪೇದೆ | |
| ವಾಸಸ್ಥಳ | : | ಚಳ್ಳಕೆರೆ | ದಿಃ 18-02-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

2017 ರಿಂದ ಇಲ್ಲಿಯವರೆಗೆ ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 04.10.2025 ರಂದು ನನಗೆ ಹಾಗೂ ಚಾಸಾ-9 ರವರಿಗೆ ಚಾಸಾ-11 ರವರು ನಗರ ಗಸ್ತು ಕರ್ತವ್ಯಕ್ಕೆ ನೇಮಿಸಿ ಅನುಮಾನಾಸ್ಪದ ವ್ಯಕ್ತಿಗಳನ್ನು ಕರೆ ತರಲು ಸೂಚಿಸಿದ ಮೇರೆಗೆ ನಾನು ಮತ್ತು ಚಾಸಾ-9 ರವರು ನಗರ ಗಸ್ತು ಮಾಡಲು ನೆಹರು ಸರ್ಕಲ್ ನಿಂದ ರಹೀಂ ನಗರ, ರಹೀಂ ನಗರದಿಂದ ನಾಯಕನಹಟ್ಟಿ ಕ್ರಾಸ್ ನಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಮೋಟಾರ್ ಸೈಕಲ್ ನಲ್ಲಿದ್ದ ಒಬ್ಬ ಆಸಾಮಿ ನಮ್ಮನ್ನು ನೋಡಿ ಮರೆ ಮಾಚಿಕೊಳ್ಳಲು ಪ್ರಯತ್ನಿಸಿರುತ್ತಾನೆ, ಆತನನ್ನು ವಿಚಾರಿಸಿದಾಗ ಸರಿಯಾದ ಮಾಹಿತಿ ತಿಳಿಸಿರುವುದಿಲ್ಲ. ಸದರಿ ಆಸಾಮಿಯ ಬಳಿ ಇದ್ದ ಕೆಎ-16 ಇಕೆ-7690 ಮೋಟಾರ್ ಬೈಕ್ ನ ದಾಖಲೆಗಳನ್ನು ಕೇಳಿದಾಗ ಮಾರನೇ ದಿನ ಹಾಜರು ಪಡಿಸುವುದಾಗಿ ಹೇಳಿರುತ್ತಾನೆ. ತದ ನಂತರ ಆತನನ್ನು ಚಾಸಾ-11 ರವರ ಸಮ್ಮುಖ ಹಾಜರು ಪಡಿಸಿರುತ್ತೇನೆ. ಚಾಸಾ-11 ರವರು ಆತನನ್ನು ವಿಚಾರಣೆ ಮಾಡಿದಾಗ ಮಹಮ್ಮದ್ ಷರೀಫ್ ತಂದೆ ಪಿರನ್ ಸಾಬ್, ಆಜಾದ್ ನಗರ, ಹಿರಿಯೂರು ಪಟ್ಟಣ ಎಂದು ತಿಳಿಸಿ ವಾಹನದ ದಾಖಲಾತಿಯನ್ನು ನಾಳೆ ಹಾಜರು ಪಡಿಸುವುದಾಗಿ ಹೇಳಿ ಹೋಗಿರುತ್ತಾನೆ.

ದಿನಾಂಕ 05.10.2025 ರಂದು ಚಾಸಾ-11 ರವರು ಆರೋಪಿ ಬಳಿ ಇದ್ದ ಕೆಎ-16 ಇಕೆ-7690 ವಾಹನ ಠಾಣಾ ಮೊಕದ್ದಮೆ ಸಂಖ್ಯೆ 377/2025 ಮೊಕದ್ದಮೆಗೆ ಸಂಬಂಧಿಸಿದ್ದರಿಂದ ಸದರಿ ಆಸಾಮಿಯನ್ನು ಪತ್ತೆ ಮಾಡಿಕೊಂಡು ಬರಲು ನಮ್ಮನ್ನು ನೇಮಿಸಿದ್ದರು. ನಾನು ಮತ್ತು ಚಾಸಾ-11 ರವರು ಬಾತ್ಮಿದಾರರಿಂದ ಬಂದ ಮಾಹಿತಿ ಮೇರೆಗೆ ಆರೋಪಿಯನ್ನು ಬಳ್ಳಾರಿ ರಸ್ತೆಯ

ಬಳಿ ಹಿಡಿದು ಚಾಸಾ-11 ರ ಮುಂದೆ ಹಾಜರು ಪಡಿಸಿರುತ್ತೇವೆ. ಈ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀಮತಿ ಬಿ.ಜಿ., ಆರೋಪಿ ಪರ ವಕೀಲರಿಂದಃ**

ಬೆಳಿಗ್ಗೆ 10-00 ಗಂಟೆಗೆ ನನ್ನನ್ನು ಗಸ್ತು ಕರ್ತವ್ಯಕ್ಕೆ ನೇಮಿಸಿರುತ್ತಾರೆ. ವಿಠ್ಠಲ್ ನಗರ, ಜಾಫರ್ ಶರೀಫ್ ಲೇ ಔಟ್, ವಾಲ್ಮಿಕಿ ನಗರ, ತ್ಯಾಗರಾಜ ನಗರದಲ್ಲಿ ಗಸ್ತು ಕರ್ತವ್ಯ ಮಾಡಿರುತ್ತೇವೆ. ನಂತರ ಮದ್ಯಾಹ್ನ ಊಟ ಆದ ನಂತರ ನೆಹರೂ ಸರ್ಕಲ್, ರಹೀಂ ನಗರ ಹಾಗೂ ನಾಯಕನಹಟ್ಟಿ ಸರ್ಕಲ್ ನಲ್ಲಿ ಗಸ್ತು ಕರ್ತವ ನಿರ್ವಹಿಸಿರುತ್ತೇನೆ. ನಾಯಕನಹಟ್ಟಿ ಕ್ರಾಸ್ ಬಳಿ ಹೋಗಿದ್ದಾಗ ಸಮಯ ಮದ್ಯಾಹ್ನ 03-30 ಆಗಿತ್ತು. ಅದೇ ದಿನ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದಾಗ ಸಂಜೆ 0400 ಗಂಟೆ ಆಗಿತ್ತು. ನಾನು ಗಸ್ತು ಕರ್ತವ್ಯಕ್ಕೆ ಹೋಗದೇ ಇದ್ದರೂ ಮೇಲಾಧಿಕಾರಿಗಳ ಹಾಗೂ ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನು ಕೇಳದೇ ಇದ್ದರೆ ಬಡ್ತಿಗೆ ತೊಂದರೆ ಯಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 04.10.2025 ರಂದು ಇನ್ನೆರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಯ ವಿರುದ್ಧ ದೂರು ದಾಖಲಾಗಿತ್ತು ಎಂದರೆ ಸರಿ. ದೂರಿಗೆ ಸಂಬಂಧಿಸಿದ ನಿಜವಾದ ಆರೋಪಿಯನ್ನು ಪತ್ತೆ ಮಾಡಲು ಸಾಧ್ಯವಾಗದ ಕಾರಣ ತಮ್ಮ ಠಾಣೆಯ ಹವ್ಯಾಸಿ ಅಪರಾಧಿಯಾದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ